ಆರ್‌ಡಿ 191ಎಲ್‌ಜಿಎಂ 90, ದಿನಾಂಕ 15.10.90ರಲ್ಲಿ ಸರ್ಕಾರದ ಮುಂದಿನ ಆದೇಶದವರೆಗೆ ಈ ಬಗ್ಗೆ ಯಾವುದೇ ಕ್ರಮ ಕೈಗೊಳದಂತೆ ಮೈಸೂರು ಜಿಲ್ಲಾಧಿಕಾರಿಯವರಿಗೆ ನಿರ್ದೇಶಿಸಲಾಗಿದೆ.

ಈ ಬಗ್ಗೆ ಕರ್ನಾಟಕ ವಿಚಾರಣಾ ನ್ಯಾಯಾಧೀಖರಣವು ತಡೆಯಾಜ್ಞೆಯನ್ನು ನೀಡಿರುವುದರಿಂದ ಪ್ರಸ್ತುತ ಯಾವುದೇ ಕ್ರಮವನ್ನು ತೆಗೆದುಕೊಳ್ಳಲು ಸಾಧ್ಯವಿರುವುದಿಲ್ಲ.

9) ಸೇಡಂ ತಾಲ್ಲೂಕಿನ ಶಿಲಾಲ, ಕೊಟನಾಡೇಪಲ್ಲಿ ಮುಂತಾದ ಗ್ರಾಮಗಳಿಗೆ ಕುಡಿಯುವ ನೀರಿನ ಸೌಕರ್ಯ

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಉಪಾಧ್ಯಕ್ಷಣೆಯವರೆ, ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಶಿಲಾರಕೋಟಿ, ಸಾದೇಪಲ್ಲಿ, ಮೇದಕ್, ತೆಲಕೂರ್ ಮತ್ತು ರಾಜೋಳಿ (ಕೆ) ಚಿತ್ತಾಪುರ ತೂಲ್ಲೂಕಿನ ಇನ್ನಿತರ ಗ್ರಾಮಗಳಲ್ಲಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಾಗಲಿ, ಪೈಪು ನೀರು ಸರಬರಾಜು ಯೋಜನೆಯಡಿಯಲ್ಲಾಗಲಿ ಇವುಗಳ ಬಗ್ಗೆ ಅಂತಿಮ ಬಿಲ್ ಮಾಡಿ ಎರಡು ಮೂರು ವರ್ಷಗಳಾದರೂ ಸಹಾ ಆ ಯೋಜನೆಗಳಿಂದ ನೀರು ಸರಬರಾಜು ಇಲ್ಲ. ಗುಲ್ಬರ್ಗಾ ಜಿಲ್ಲಾಪರಿಷತ್‌ನವರು ಜಿಲ್ಲಾಪರಿಷತ್ತಿನ ಸಾಮಾನ್ಯ ಸಭೆ, ಅಥವಾ ಸ್ಥಾಯಿ ಸಮಿತಿ ಒಪ್ಪಿಗೆ ಇಲ್ಲದೆ ಕೋಟ್ಯಾಂತರ ರೂಪಾಯಿಗಳ ಪೈಪುಗಳನ್ನು ಖರೀದಿ ಮಾಡಿದ್ದಕ್ಕಾಗಿ ಈ ಕೆಲಸಕ್ಕೆ ತಕ್ಕ ಗೇಜ್ ಇಲ್ಲದ ಪೈಪುಗಳು ಹಾಗೂ ವೇಳೆ ಮೀರಿದ ನಂತರ ಉಪಯೋಗಿಸಿದ್ದಕ್ಕಾಗಿ ಅದರ ಗುಣಮಟ್ಟವನ್ನು ಕಳೆದುಕೊಂಡಿರುವುದರಿಂದ ಪೈಪುಗಳನ್ನು ಉಪಯೋಗಿಸಿ ಅವುಗಳನ್ನು ಸಹತಾಂತ್ರಿಕವಾಗಿ 3 ಅಡಿ ತೋಡದೆ ಉಸುಕು ಹಾಕದೆ ಹಣ ಮಾತ್ರ ಎಲ್ಲಾ ಕೆಲಸಕ್ಕಾಗಿ ಪಡೆದು ಲಕ್ಷಾಂತರ ರೂಪಾಯಿಗಳು ಖರ್ಚು ಮಾಡಿ ನೀರು ಸರಬರಾಜು ಮಾಡುವುದರಲ್ಲಿ ವಿಫಲಗೊಂಡಿದ್ದಾರೆ. ಇಂಥಾ ಪೈಪುಗಳನ್ನು ಮುಂದೆಯೂ ಉಪಯೋಗಿಸದಂತೆ ಆದೇಶ ನೀಡಿ ಕೋಟ್ಯಾಂತರ ರೂಪಾಯಿ ಪೈಪುಗಳನ್ನು ಜಿಲ್ಲಾಪರಿಷತ್ತಿನ ಸಭೆಯ ಒಪ್ಪಿಗೆ ಇಲ್ಲದೆ ಖರೀದಿ ಮಾಡಿದ್ದಕ್ಕಾಗಿ ವಿಚಾರಣೆ ಮಾಡಲು ಆದೇಶ ನೀಡಿ, ಕುಡಿಯುವ ನೀರಿನ ಸರಬರಾಜು ಮಾಡುವ ವ್ಯವಸ್ಥೆ ಮಾಡಲು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಾಕ್ಷಣೆಯರೆ, ನಾನು ಗ್ರಾಮೀಣಾಭಿವೃದ್ಧಿ ಇಲಾಖೆಯ ಸಚಿವರ ಪರವಾಗಿ ಈ ಹೇಳಿಕೆಯನ್ನು ಮಾಡುತ್ತಿದ್ದೇನೆ.

ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಸಿಲಾರಕೋಟೆ (1760) ಮತ್ತು ನಾಡೇಪಲ್ಲಿ (1385) ಗ್ರಾಮಗಳಲ್ಲಿ ಕಿರುನೀರು ಸರಬರಾಜು ಯೋಜನೆ ಪೂರ್ಣಗೊಂಡಿದ್ದರೂ ಸಹ, ಈ ಯೋಜನೆಗಳ ನಿರ್ವಹಣೆಯನ್ನು ಮಂಡಲ ಪಂಚಾಯತಿಯವರು ವಹಿಸಿಕೊಳ್ಳದೆ ಇರುವುದರಿಂದ ಕಾರ್ಯಾರಂಭ ಮಾಡಲಾಗಲಿಲ್ಲ. ಈ ಯೋಜನೆಗಳ ನಿರ್ವಹಣೆ ಬೇಕಾದ ಆಪರೇಟರ್‌ಗಳನ್ನು ಕೂಡಲೇ ನೇಮಕಾತಿ ಮಾಡುವ ವ್ಯವಸ್ಥೆ ಮಾಡಿ ಈ ಯೋಜನೆಗಳ ನಿರ್ವಹಣೆಯನ್ನು ವಹಿಸುಕೊಳ್ಳುವಂತೆ ಮಂಡಲ ಪಂಚಾಯಿತಿಗಳಿಗೆ ಆದೇಶ ನೀಡಲಾಗುವುದು

ಮೇದಕ (1202) ಗ್ರಾಮದಲ್ಲಿ ಮೂರು ಕೊಳವೆ ಬಾವಿಗಳಿಗೆ ಕೈಪಂಪುಗಳನ್ನು ಜೊಡಿಸಿ ಉಪಯೋಗಿಸಲಾಗುತ್ತಿದೆ. ಬೇಸಿಗೆಯಲ್ಲಿ ಈ ಕೊಳವೆಬಾವಿಗಳ ಇಳುವರಿ ಕಡಿಮೆಯಾಗುವುದರಿಂದ ಕುಡಿಯುವ ನೀರಿಗೆ ತೊಂದರೆಯಾಗುತ್ತದೆ. ಈ ಸಮಸ್ಯೆಯನ್ನು ನಿವಾರಿಸಲು ಈ ಗ್ರಾಮಕ್ಕೆ ಹಾಗೂ ಸಿಲಾರಕೋಟೆ ಗ್ರಾಮಕ್ಕೆ ಕೊಳವೆ ನೀರು ಸರಬರಾಜು ಯೋಜನೆಗಳನ್ನು ಕೈಗೊಳ್ಳಲು 1991-92 ಸಾಲಿನಲ್ಲಿ ಯೋಚಿಸಲಾಗಿದೆ.

ತೆರಕೂರ್ (1067) ಗ್ರಾಮದಲ್ಲಿ ಕೈಪಂಪು ಜೊಡಿಸಿರುವ 5 ಕೊಳವೆ ಬಾವಿಗಳು ಹಾಗೂ ಒಂದು ಕಿರು ನೀರು ಸರಬರಾಜು ಯೋಜನೆಗಳು ಇರುತ್ತದೆ. ಜಲಮೂಲವು ಕಡಿಮೆಯಾಗಿರುವುದರಿಂದ ಕಿರುನೀರು ಸರಬರಾಜು ಯೋಜನೆಯ ಪುನಶ್ಚೇತನ ಕಾರ್ಯ ಕೈಗೊಂಡು ಆದಷ್ಟು ಬೇಗ ಪೂರ್ಣಗೊಳಿಸಲಾಗುವುದು.

ರಾಜೋಳ (661) ಗ್ರಾಮದಲ್ಲಿ ಮೂರು ಕೈಪಂಪು ಜೊಡಿಸಿರುವ ಕೊಳವೆಬಾವಿಗಳು ಇದ್ದು ಬೇಸಿಗೆಯಾದ್ದರಿಂದ ಕುಡಿಯುವ ನೀರಿಗೆ ತೊಂದರೆಯಾಗುತ್ತದೆ.

ಸೇಡಂ ತಾಲ್ಲೂಕು ಹಾಗೂ ಚಿತ್ತಾಪುರ ತಾಲ್ಲೂಕಿನ ಕುಡಿಯುವ ನೀರಿನ ಯೊಜನೆಗಳಲ್ಲಿ ಅಳವಡಿಸಿರುವ ಪೈಪುಗಳು ಗುಣಮಟ್ಟಕ್ಕೆ ಅನುಗುಣವಾಗಿಲ್ಲವೆಂದು ತಿಳಿಸಿರುತ್ತೀರಿ. ಈ ಬಗ್ಗೆ ತಿಳಿಸಬಯಸುವದೇನೆಂದರೆ ಎಲ್ಲಾ ಪೈಪುಗಳು ಐಎಸ್‌ಐ (ISI) ಮುದ್ರೆಹೊಂದಿ ಕರ್ನಾಟಕ ಸರ್ಕಾರದ ಸರಕು ಖರೀದಿ ಇಲಾಖೆ (Stores Purchase Department) ಅವರಿಂದ ಅನುಮೊದನೆ ಆಗಿರುವವರ Rate contract ಹೊಂದಿರುವು ಸಂಸ್ಥೆಗಳ ಮೂಲಕವೇ ಪೈಪುಗಳನ್ನು ಖರೀದಿ ಮಾಡಲಾಗಿದೆ. ಈ ಪೈಪುಗಳು ಸರಬರಾಜಾಗುವುದಕ್ಕೆ ಮುಂದೆ ಮೂರನೆಯವರಿಂದ ಅಂದರೆ ಭಾರತ ಸರ್ಕಾರದ ಡಿ.ಜಿ.ಎಸ್ ಮತ್ತು ಡಿ (Direct General of Supplies and Disposals) ಅವರ ಮೂಲಕ ಗುಣಪರೀಕ್ಷೆ ಮಾಡಿಸಲಾಗುತ್ತದೆ. ಹಾಗೂ ಅವರಿಂದ ಈ ಪೈಪುಗಳ ಗುಣಮಟ್ಟ ಸಾಭೀತಾದ ಬಗ್ಗೆ ಪ್ರಮಾಣಪತ್ರ ಲಭ್ಯವಿರುತ್ತದೆ.

ಈ ಪೈಪುಗಳನ್ನು ಖರೀದಿ ಮಾಡಲು ಜನಾರೋಗ್ಯ ಇಲಾಖೆಯ ಪ್ರದಾನ ಇಂಜಿನಿಯರ್ ಮೂಲಕ ಬರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರದ ಉನ್ನತ ಮಟ್ಟದ ಸಮಿತಿ (High Power Committee) ಯಲ್ಲಿ ಒಪ್ಪಿಗೆ ಪಡೆಯುಲಾಗುತ್ತದೆ. ಆದುದರಿಂದ ಇದರ ಬಗ್ಗೆ ಪೂರ್ವಾನುಮತಿ ಇಲ್ಲದೆ ಪೈಪುಗಳನ್ನು ಖರೀದಿ ಮಾಡಿರುವ ಬಗ್ಗೆ ವಿಚಾರಣೆ ನಡೆಸುವ ಅವಶ್ಯಕತೆ ಕಂಡು ಬರುವುದಿಲ್ಲ.

ಯೋಜನೆಗಳಲ್ಲಿ ಉಪಯೋಗಿಸುವ ಪೈಪುಗಳ ದಪ್ಪ ಅವುಗಳಿಗೆ ಬೇಕಾಗಿರುವ ನೀರಿನ ಒತ್ತಡಕ್ಕೆ ಅನೂಸಾರವಾಗಿರುವುದರಿಂದ ಈ ಪೈಪುಗಳನ್ನು ಆಯ್ಕೆ ಮಾಡುವಾಗ ಸೂಕ್ತ ದರ್ಜೆಯ (ದಪ್ಪದ) ಕೊಡವೆಗಳನ್ನೇ ಆಯ್ಕೆ ಮಾಡಿ ಉಪಯೋಗಿಸಲಾಗುವುದು.

STATEMENT BY THE MINISTER

SUB : Extension of the time for holding electionns to co-operative societies.

SRI K.H. PATIL (Hon. Minister for co operation) : Madam Deputy Speaker, I wish to make the following statement:

"Whereas Govt. of Karnataka regulated conduct of Annual General Meetings alongwith elections if any, of all the Coops. vide Notification No.CMW 97 CLM 90, (P-II) dt..11th December, 1990 and 28th Decemebr, 1990. Persuant to this Notification some of the Coops. Societies of less than taluk jurisdictions have already conducted their Annual General Meetings. In the meanwhile Hon'ble High Court of Karnataka issued stay to the above said Notifications, subsequently the connected writ petitions were dismissed. Due to this some of the coop. Societies of less than Taluk jurisdiction did not complete conduct of AGMs and elections.